**OS No:03/2022**
**DW**:1

(ಇಂದು ದಿನಾಂಕಃ **17-07-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ವಿ ಟಿ ಕೆ ವಕೀಲರಿಂದಃ**

ಮೃತ ಮೂಗಪ್ಪ ರವರು ತನ್ನ ಜೀವಿತಾವಧಿಯಲ್ಲಿ ಇದೇ ನ್ಯಾಯಾಲಯದಲ್ಲಿ ಮೂಲ ದಾವಾ ಸಂಃ 44/2016 ನ್ನು ಹುಚ್ಚಪ್ಪ, ಬಸವರಾಜ, ಸುರೇಶ ಹಾಗೂ ಸುಶೀಲಾ ರವರ ವಿರುದ್ಧ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಸುಶೀಲಾ ಎಂದರೆ ಪ್ರಕರಣದ ವಾದಿ ಎಂದರೆ ಸರಿ. ಮೂಲ ದಾವಾ ಸಂಃ 44/2016 ಮೂಗಪ್ಪ ರವರು ದಾವಾ ಆಸ್ತಿಗಳಿಗೆ ತಾನೇ ಮಾಲೀಕ ಎಂದು ಕೋರಿ ಹಾಗೂ ಸುಶೀಲಾ ರವರು ದಾವಾ ಆಸ್ತಿಗಳಿಗೆ ಸಂಬಂಧವಿಲ್ಲ ಎಂದು ತಿಳಿಸಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಸುಶೀಲಾ ರವರು ತಾನು ಮೂಗಪ್ಪನ ಹೆಂಡತಿ ಎಂದು ಪ್ರತಿಪಾದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೂಗಪ್ಪ ಮೃತಪಟ್ಟ ನಂತರ ನಾವು ವಾರಸ ನಾತೆಯಿಂದ ಸದರಿ ದಾವೆಯಲ್ಲಿ ಸೇರ್ಪಡೆಯಾಗಿರುತ್ತೇವೆ ಎಂದರೆ ಸರಿ. ಆಗ ನಾವು ಸದರಿ ದಾವೆಯ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡಿರುತ್ತೇವೆ. ನಂತರ ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಸರಿ.

2. ಪ್ರಸ್ತುತ ವಾದಿ ಮೂಗಪ್ಪನ ವಿರುದ್ಧ ಮೂಲ ದಾವಾ ಸಂಃ 50/2015 ನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರಸ್ತುತ ದಾವೆಯ 1 ರಿಂದ 4 ನೇ ಪ್ರತಿವಾದಿಯರು ಸಹ ಪಕ್ಷಕಾರರಾಗಿದ್ದರು ಎಂದರೆ ಸರಿ. ಸದರಿ ದಾವೆಯನ್ನು ವಾದಿ ಜೀವನಾಂಶ ಕೋರಿ ಹಾಗೂ ದಾವಾ ಆಸ್ತಿಯ ಮೇಲೆ ಚಾರ್ಜ ಕೋರಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು 2 ನೇ ಪ್ರತಿವಾದಿಯಾಗಿದ್ದೆ ಎಂದರೆ ಸರಿ. ಕಾರಣ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆ ಚಾಲ್ತಿಯಲ್ಲಿದ್ದಾಗ ಮೂಗಪ್ಪ ಮೃತಪಟ್ಟಿರುತ್ತಾರೆ ಎಂದರೆ ಸರಿ. ವಾದಿಗೆ ಮಕ್ಕಳಿಲ್ಲ ಎಂದರೆ ಸರಿ. ನಂತರ ವಾದಿ ಸದರಿ ದಾವೆ ಉರ್ಜಿತವಾಗುವುದಿಲ್ಲ ಎಂದು ಹಿಂಪಡೆದುಕೊಂಡಿರುತ್ತಾರೆ ಎಂದರೆ ಸರಿ. ನಂತರ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ.

3. ನಮ್ಮ ಕುಟುಂಬದ ಮೂಲ ಪುರುಷ ಚೆನ್ನಪ್ಪ ಎಂದರೆ ಸರಿ. ಸದರಿ ಚೆನ್ನಪ್ಪನಿಗೆ ಗೂರಪ್ಪ ಎನ್ನುವ ಸಹೋದರನಿದ್ದಾನೆ ಎಂದರೆ ಸರಿ. ಸದರಿ ಚೆನ್ನಪ್ಪನ ಹೆಂಡತಿ ಮಲ್ಲಮ್ಮ ಎಂದರೆ ಸರಿ. ಸದರಿಯವರಿಗೆ ಮೂಗಪ್ಪ, ಹುಚ್ಚಪ್ಪ ಹಾಗೂ ಬಸವರಾಜ ಎನ್ನುವ ಮೂರು ಜನ ಮಕ್ಕಳು ಎಂದರೆ ಸರಿ. ಸದರಿ ಮೂಗಪ್ಪನಿಗೆ ವಾದಿ ಹಾಗೂ ಮಹಾದೇವಿ ಎನ್ನುವ ಇಬ್ಬರು ಹೆಂಡತಿಯರು

ಎಂದರೆ ಸರಿ. ಸಾಕ್ಷಿಯು ಪುನಃ ನುಡಿಯುವುದೆಂದರೆ ಮಹಾದೇವಿ ಎನ್ನುವವರು ಮಾತ್ರ ನನಗೆ ಗೊತ್ತು ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**